ಕತೆಗಳು ಹೇಗೆ ಹುಟ್ಟುತ್ತವೆ, ಕತೆಗಳು ಏನು ಹೇಳುತ್ತವೆ, ಕತೆಗಳನ್ನು ಬರೆಯುವುದಾದರೂ ಏಕೆ... ಇವು ಸುಲಭಕ್ಕೆ ಉತ್ತರಿಸುವ ಪ್ರಶ್ನೆಗಳಲ್ಲ. ಕತೆ ಬರೆಯುವ ಪ್ರಕ್ರಿಯೆಯೇ ತೀರಾ ವೈಯಕ್ತಿಕ ವಿದ್ಯಮಾನ ಎಂದು ನನ್ನ ನಂಬಿಕೆ. ಇದನ್ನು ವಿವರಿಸ ಹೋದಲ್ಲಿ ಕತೆಯಲ್ಲಿನ ಸತ್ವ, ಅಥವಾ ಕತೆಯ ಮ್ಯಾಜಿಕ್‌ಅನ್ನೇ ನಾಶ ಮಾಡಿಬಿಡುತ್ತೇವೆ ಎನಿಸುತ್ತದೆ. ಡೇವಿಡ್ ಉಲಿನ್ ಪ್ರಕಾರ, ಸಾಹಿತ್ಯ ಒಂದು ಪ್ರಜ್ಞಾಪೂರ್ವಕವಾದ ಕ್ರಿಯೆ, ನಿಜ. ಆದರೂ ಅದೊಂದು ಅಚಾನಕ್ಕಾಗಿ ಹೊಳೆದು ಬಿಡುವ, ಅಭಿವ್ಯಕ್ತಿಗೆ ದಕ್ಕಿಬಿಡುವ, ಕಲೆ ಮತ್ತು ನೈಪುಣ್ಯತೆ ನಡುವೆ ಸಾಧಿಸಿಕೊಳ್ಳಬೇಕಾದ ಕ್ರಿಯೆ ಕೂಡಾ. ಹಾಗಾಗಿ ಕತೆಯನ್ನು ಬರೆದವರಿಗೇ ಈ ಬರೆಯುವ ಪ್ರಕ್ರಿಯೆಯನ್ನು ವಿವರಿಸುವುದು ಕಷ್ಟವಾದ ಕೆಲಸ. ಕತೆ ತನ್ನ ಬೆಳವಣಿಗೆಯಲ್ಲಿ ಚಾಚಿಕೊಳ್ಳುವ ಪರಿ ಸ್ವತಃ ಲೇಖಕರಿಗೂ ನಿಗೂಢವೇ. ಫಿಲಿಪ್ ರಾತ್ ಮಟ್ಟಿಗೆ ಕತೆ ಯಾವುದೇ ನಿಯಮಗಳಿಲ್ಲದೇ ಹುಟ್ಟಿಕೊಳ್ಳುತ್ತದೆ, ಹುಟ್ಟಿಕೊಳ್ಳಬೇಕು. ಅದಕ್ಕೆ ವಿವರಣೆಗಳ ಹಂಗಿಲ್ಲ. ಹೀಗಿದ್ದೂ ನಾನು ಕತೆ ಬರೆಯುವ ಬಗ್ಗೆ ಬರೆಯುವ ಸಾಹಸಕ್ಕೆ ಹೊರಟಿದ್ದೇನೆ.

ಕನ್ನಡದ ಕಥಾಜಗತ್ತನ್ನು ವಿಸ್ತರಿಸಿದ ಕಥೆಗಾರರ ಕಥೆ ಬರೆಯುವ ಕಸುಬಿನ ಕುರಿತಾದ ಮಾಲಿಕೆ – 'ನನ್ನ ಕಥಾಪ್ರಸಂಗ'. ಕಥಾಯಾನದ ಖುಷಿ, ಸಂಕಟ, ಆ ಪ್ರಕಾರದ ಕುರಿತಾದ ವ್ಯಾಮೋಹ, ಸವಾಲು, ಮಾಂತ್ರಿಕತೆ, ಅದರಿಂದ ಆಗುವ ಬಿಡುಗಡೆ – ಇವೆಲ್ಲ ಅನುಭವಗಳನ್ನು ಒಳಗೊಳ್ಳಲಿರುವ ಈ ಮಾಲಿಕೆಗೆ ಬಹುಕಾಲದಿಂದ ಕಥೆಗಳನ್ನು ಬರೆದುಕೊಂಡು ಬಂದ ಕಥೆಗಾರರು ಬರೆಯುತ್ತ ಬಂದಿದ್ದಾರೆ. ಕಥೆಯ ನಿರೂಪಣಾ ವಿಧಾನದ ಕುರಿತ ಕಥೆಗಾರರ ಸ್ವಅನುಭವ 'ಮಯೂರ'ದ ಈ ಪುಟಗಳಲ್ಲಿದೆ

ಮೊದಲಲ್ಲೇ ಹೇಳಿಬಿಡುತ್ತೇನೆ. ಕತೆ ಬರೆಯುವುದು ನನ್ನ ಪಾಲಿಗೆ ಒಂದು ಹಟಸಾಧನೆ ಅಲ್ಲವಾದ್ದರಿಂದ ನಾನು ನಿಯಮಗಳನ್ನಿಟ್ಟುಕೊಂಡು ಕತೆ ಬರೆಯುವುದಿಲ್ಲ. ಬರೆಯಬೇಕೆಂದು ಹುಕಿ ಹೊಕ್ಕಲ್ಲಿ ಬರೆಯುತ್ತೇನೆ, ಒಂದು ಪಾತ್ರ ಹೊಳೆದಲ್ಲಿ ಬರೆಯುತ್ತೇನೆ. ಇಲ್ಲವಾದಲ್ಲಿ ಇಲ್ಲ. ಕತೆ ಬರೆಯುವ ಕಲೆ ನನಗಿನ್ನೂ ಸಿದ್ಧಿಸಿಲ್ಲವೆಂದೇ ನನ್ನ ನಂಬಿಕೆ. ಯಾಕೆಂದರೆ ನಾನು ಕತೆ ಬರೆಯ ತೊಡಗಿದ್ದೇ ಒಂದು ಹದಿನೈದು ವರ್ಷಗಳ ಹಿಂದೆ, ಅಂದರೆ ನಾನು ನಲವತ್ತೈದರ ಗಡಿ ಮುಟ್ಟಿದಾಗ. ಎಲ್ಲಾ ಶುರುವಾಗಿದ್ದು 'ಭಾವನಾ' (ಸಂ: ಜಯಂತ ಕಾಯ್ಕಿಣಿ)ದಲ್ಲಿ, 2001ರಲ್ಲಿ 'ಕುರುವಿನ ಗುಲಾಮ' ಪ್ರಕಟವಾದಾಗ.

ಬರೆಯಲೇ ಬೇಕೆಂದುಕೊಂಡು ಬರವಣಿಗೆ ಶುರುಮಾಡಿದವನಲ್ಲ. ಹಾಗೆ ನೋಡಿದಲ್ಲಿ ನಾಟಕ ಬರೆಯುವ ಉಮೇದು ಕೂಡಾ ಇರಲಿಲ್ಲ. ನಾಟಕಗಳನ್ನು ಆಡಿಸುತ್ತಿದ್ದವನಿಗೆ ಒಂದು ಅರಿವಾಗಿತ್ತು–ಬೇರೆ ನಾಟಕಕಾರರು ಬರೆದ ನಾಟಕಗಳು ರಂಗದ ಮೇಲೆ ನನ್ನವಾಗುವುದಿಲ್ಲ, ಆ ನಾಟಕಗಳನ್ನು ನನಗೆ ಬೇಕಾದ ಹಾಗೆ ತಿದ್ದಿಕೊಳ್ಳಲು ಸಾಧ್ಯವಿಲ್ಲ, ಅದಕ್ಕೆ ಅನುಮತಿಯೂ ದೊರಕುವುದಿಲ್ಲ. ರಂಗದ ಮೇಲೆ ಕಾಣುವ ನಾಟಕಗಳೂ ನನ್ನವಾಗಬೇಕಾದಲ್ಲಿ, ನಾನೇ